ಎಲ್ಲರಿಗೂ ಅದು ಒಪ್ಪಿತವೇನಲ್ಲ. ಸೀಮಾರೇಖೆಯನ್ನು ಸೃಷ್ಟಿಸಿಕೊಂಡು ಅದನ್ನು ಪರಿಪಾಲಿಸುವ ಜಡ್ಡುಗಟ್ಟಿದ ಮನಸ್ಸುಗಳು, ತರತಮ ಭಾವ ಉಳಿಸಿಕೊಂಡವರು, ಒಂದಷ್ಟು ಜನ ಇದ್ದೇ ಇದ್ದರು. ಆಚರಣೆ ಅನ್ನುವುದು ವೈಯಕ್ತಿಕ, ಸಾರ್ವಜನಿಕವಾಗಿ ಅದರ ತೋರಿಕೆ ಸಲ್ಲ ಎಂದು ಶಾಸ್ತ್ರಿಗಳ ಗಟ್ಟಿ ನಂಬಿಕೆ, ಅಭಿಪ್ರಾಯ. ಬೆನ್ನಿಗೆ ಮತ್ತೊಂದು ಕೊಂಡಿ ಕೂಡಿಸಿಕೊಂಡಿತು. ಭಕ್ತರೊಬ್ಬರು ದೇವಸ್ಥಾನಕ್ಕೆ ಇಪ್ಪತ್ತೈದು ಪ್ಲಾಸ್ಟಿಕ್ ಕುರ್ಚಿಗಳನ್ನು ಕೊಡುಗೆಯಾಗಿ ನೀಡಿದ್ದರು. ವಯಸ್ಸಾದ ಹಿರಿ ಜೀವಗಳು ಪೂಜೆ ಮುಗಿಯುವವರೆಗೆ ನಿಂತುಕೊಂಡಿರಲು ಕಷ್ಟ ಎಂದು ಈ ಏರ್ಪಾಟು. ಈ ಕುರ್ಚಿಗಳನ್ನು ಆಕ್ರಮಿಸಿಕೊಂಡು ಕೂರಲು ಒಳಗೊಳಗೇ ಪೈಪೋಟಿ. ಉಳಿದವರು ಅವರ ಕಾಲಬುಡದಲ್ಲಿ ಕೂರಬೇಕಾದ ಸಂದರ್ಭದ ಕುರಿತು ಕೆಲವರ ಆಕ್ಷೇಪ. ಶಾಸ್ತ್ರಿಗಳ ಮಧ್ಯಸ್ಥಿಕೆಯಲ್ಲಿ ಎಲ್ಲಾ ದೂರುಗಳೂ ಕಾಲಕಾಲಕ್ಕೆ ಪರಿಹಾರ ಕಂಡುಕೊಳ್ಳುತ್ತಿದ್ದುವು. ಪ್ರಸಾದ ಹಂಚುವ ಕೆಲಸದಲ್ಲಿ ಆಸಕ್ತರೆಲ್ಲಾ ಪಾಲ್ಗೊಳ್ಳುವಂತಾಯ್ತು. ಎಪ್ಪತ್ತು ಮೀರಿದವರಿಗಷ್ಟೇ ಕುರ್ಚಿಗಳು ಮೀಸಲಾದುವು. ಇಂತಾ ಸಣ್ಣ ದೊಡ್ಡ ಏನೇ ಆಕ್ಷೇಪಣೆಗಳು ತಲೆ ಎತ್ತಿದರೂ ಅವನ್ನೆಲ್ಲಾ ಮೊಳಕೆಯಲ್ಲೇ ಚೂಟಿ ಹಾಕುವ ಶಾಸ್ತ್ರಿಗಳ ನಿಷ್ಪಕ್ಷಪಾತ ನ್ಯಾಯ ತೀರ್ಮಾನದಿಂದ ಜನಮಾನಸದಲ್ಲಿ ಅವರ ಸ್ಥಾನ ಮತ್ತಷ್ಟು ಏರಿಕೆಯಾಯ್ತು.

★★★

ನೀಲಕಂಠ ಶಾಸ್ತ್ರಿಗಳ ಅರಿವಿಗೆ ಬರದೆ, ಅವರ ಹಿತೈಷಿಗಳೆನ್ನಿಸಿಕೊಂಡವರು ಅವರ ಗಮನಕ್ಕೆ ತರಲು ಮುಂದಾಗದೆ, ಮತ್ತೊಂದು ಪುಕಾರು ಊರಲ್ಲಿ ದುರ್ನಾತದ ಹಾಗೆ ಹರಡಿಕೊಳ್ಳುತ್ತಿತ್ತು. ವಿಪರ್ಯಾಸ ಅಂದರೆ ಯಾವಾಗ ಶಾಸ್ತ್ರಿಗಳು ಇಂತಾದ್ದೊಂದು ಸಂಭವದ ಕುರಿತು ಜಾಗೃತರಾಗಿದ್ದರೋ ಆಗ ವಾಸ್ತವವಾಗಿ ಏನೂ ಘಟಿಸಿರಲಿಲ್ಲ. ಅಂದರೆ, ಆ ಬಗ್ಗೆ ಯಾವ ದೂರೂ ಹಬ್ಬಿರಲಿಲ್ಲ. ಈಗ ಮಗ ಸುಭಗನಾಗಿದ್ದಾನೆ, ಸಂಸಾರವಂದಿಗನಾಗಿದ್ದಾನೆ ಎಂದು ಶಾಸ್ತ್ರಿಗಳು ನಂಬಿಕೊಂಡಿದ್ದ ಕಾಲದಲ್ಲಿ ಪರಿಸ್ಥಿತಿ ತಿರುವುಮುರುವಾಗಿತ್ತು. ದೇವಸ್ಥಾನದ ಸುತ್ತುಕೆಲಸಗಳಿಗೆ ಬರುತ್ತಿದ್ದ ಭಾಗ್ಯ ಎನ್ನುವ ಹೆಣ್ಣಿನ ಜೊತೆ ವಿಶ್ವೇಶ್ವರ ಶಾಸ್ತ್ರಿಗಳಿಗೆ ಏನೋ ಇದೆ ಎಂದು ಜನ ಬೆನ್ನ ಹಿಂದೆ ಮಾತಾಡಿಕೊಂಡು ನಗುತ್ತಿದ್ದರು ಅನ್ನುವುದು ಶಾಸ್ತ್ರಿಗಳಿಗೆ ಗೊತ್ತಿರಲಿಲ್ಲ. ಆ ಕುರಿತು ಅನುಮಾನ ಕೂಡಾ ಬಂದಿರಲಿಲ್ಲ. ಮಗ ಏರುಪ್ರಾಯದ ಯುವಕನಲ್ಲ. ನಲವತ್ತರ ಆಸುಪಾಸಿನವನು. ಈ ವಯಸ್ಸಿನಲ್ಲಿ ಅವನ ಮೇಲೆ ನಿಗಾ ಇಡಬೇಕಾದ ಅವಶ್ಯಕತೆಯೇನಿಲ್ಲ ಎಂದು ಶಾಸ್ತ್ರಿಗಳ ನಂಬಿಕೆ. ಭಾಗ್ಯ ಕೂಡಾ ಹರೆಯ ಉಕ್ಕುವ ಹೆಣ್ಣೇನಲ್ಲ. ಮೂವತ್ತೆರಡರ ಮೇಲಿನ ವಯಸ್ಸಿನವಳು. ದೇವಸ್ಥಾನದ ಸುತ್ತಮುತ್ತ ಕಸ ಉಡುಗುವುದು, ಒಳಗೆ ನೆಲ ವರೆಸುವುದು, ಚಂದದ ರಂಗೋಲಿ ಹಾಕುವುದು, ಪೂಜೆಯ ಉಪಕರಣಗಳನ್ನು ಫಳ್ಳನೆ ಬೆಳಗಿಡುವುದು, ಸುತ್ತಮುತ್ತ ಇರುವ ಹೂಗಿಡಗಳಿಗೆ ನೀರು ಹಾಕುವುದು ಮುಂತಾದ್ದು ಅವಳ ಉದ್ಯೋಗ. ಅದೂ ಅವಳು ಕೆಲಸಕ್ಕೆ ಬರುತ್ತಿರುವುದು ಒಂದೆರಡು ವರ್ಷಗಳಿಂದೀಚೆಗೆ. ನೋಡಲು ಸುಮಾರಿಗಿದ್ದಾಳೆ, ಅಷ್ಟೇ. ಬೆಳಗ್ಗೆ ಒಂದೊಂದೂವರೆ ಘಂಟೆ ಕೆಲಸ ಇದ್ದರೆ ಹೆಚ್ಚು. ಬೇಗ ಎದ್ದು ದೇವಸ್ಥಾನದ ಸುತ್ತಾ ನೆಟ್ಟುಕೊಂಡಿದ್ದ ಹೂಗಿಡಗಳಿಂದ ಹೂ ಕುಯ್ದುಕೊಂಡು ಬರುವುದರೊಂದಿಗೆ ಭಾಗ್ಯ ಬರುವ ಹೊತ್ತು ಕಾದು ದೇವಸ್ಥಾನದ ಹೊರಾಂಗಣದ ಬೀಗ ತೆಗೆದುಕೊಟ್ಟು, ಅವಳು ಕೆಲಸ ಮುಗಿಸಿಕೊಂಡು ಹೋಗುವವರೆಗೆ ಅಲ್ಲೇ ಅಡ್ಡಾಡಿಕೊಂಡು, ಅನಂತರ ಬೀಗ ಹಾಕಿಕೊಂಡು ಬರುವುದು ವಿಶ್ವೇಶ್ವರನ ದಿನಚರಿ. ಮೊದಲು ಕೆಲಸಕ್ಕಿದ್ದವಳು ಮಾಗಿದ ವಯಸ್ಸಿನ ಹೆಂಗಸು. ಅವಳಿಗೆ ಏನೋ ಜಡ ಹಿಡಿದುಕೊಂಡು ಅನಂತರ ಅವಳೇ ಗೊತ್ತು ಮಾಡಿಕೊಟ್ಟ ಹೆಣ್ಣು ಈ ಭಾಗ್ಯ. ಗಂಡ ಕುಡಿದು ಕುಡಿದು ಪೆಟ್ಟಿಗೆ ಕಟ್ಟಿದ ಮೇಲೆ ಎರಡು ಮಕ್ಕಳ ಜವಾಬ್ದಾರಿ ಇವಳ ತಲೆಯ ಮೇಲೆ. ಶನಿವಾರದ ದಿನ ವಿಶ್ವೇಶ್ವರ ಅವಳಿಗೆ ಪ್ರಸಾದದ ದೊಡ್ಡ ಪಾಲನ್ನು ಕೊಡುತ್ತಾನೆ ಎಂದು ಯಾರೋ ಪತ್ತೆ ಮಾಡಿಬಿಟ್ಟಿದ್ದರು. ಎಲ್ಲಾ ಹೋಗುವವರೆಗೆ